ಪ್ರವಚನದಲ್ಲಿ ಅನೇಕ ಎತ್ತರವಾದ ವಿಚಾರಗಳನ್ನು ಹೇಳಿದ್ದಾರೆ. ನಾಯಿ ಎಂದರೆ ನಾರಾಯಣನಿಗೆ ಸಮ. ನಾಯಿ ಎನ್ನತಕ್ಕದ್ದು ಎಂದರೆ ನಾರಾಯಣ ಎಂದು...

ಶ್ರೀ ಎಸ್. ಬಂಗಾರಪ್ಪ:- ನಾರಾಯಣ ನಿಷ್ಠೆ ಎಂದು ಬೇಕಾದರೆ ಹೇಳಿಕೊಳ್ಳಿ....

(ಗೊಂದಲ)

ಶ್ರೀ ಪಾಟಾಳ್ ನಾಗರಾಜ್:- ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀಮಾನ್ ಚಂದ್ರೇಗೌಡರು ಬಹಳ ದೊಡ್ಡ ಪದವನ್ನು, ಬಹಳ ಗೌರವಯುತವಾದ ಪದವನ್ನು ಉಪಯೋಗಿಸಿದ್ದಾರೆ. ಅವರು ಇದನ್ನು ಉಪಯೋಗಿಸಬಾರದಿತ್ತು. ** ಇದೆಯೆಲ್ಲ ಅಂತಹ ನಿಷ್ಠೆ ಮನುಷ್ಯನಿಗೂ ಇಲ್ಲ. ನಾಯಿಯದು ಅಂತಹ ಪರಿಣಾಮಕಾರಿಯಾದ ನಿಷ್ಠೆ. ಈ ಬಗ್ಗೆ ರೈತ ಸಂಘದ ಅಧ್ಯಕ್ಷರಾದ ಪ್ರೊ:ನಂಜುಂಡಸ್ವಾಮಿಯವರು ವ್ಯಾಖ್ಯಾನ ಬಹಳ ಸರಿಯಾಗಿ ಮಾಡಿದ್ದಾರೆ. ಶ್ರೀಮಾನ್ ಕೆ.ಪೆಚ್. ಪಾಟೀಲರು ಈ ಪದವನ್ನು ಸಂತೋಷವಾಗಿ, ಅಭಿಮಾನದಿಂದ ಸ್ವೀಕಾರ ಮಾಡಿದ್ದಾರೆ. ಆದರೆ ನಮ್ಮ ಮೊಯಿಲಿಯವರ ವ್ಯಾಖ್ಯಾನ ಮಾತ್ರ ನನಗೆ ಅರ್ಥ ಆಗಿಲ್ಲ. ಅಂದರೆ ಅದು ಸರಿಯಾದುದು ಅಲ್ಲ. ಅವರಲ್ಲಿ ಎರಡು ಗುಂಪು ಆಯಿತು....

(ಗೊಂದಲ)

ಶ್ರೀ ಬಸವರಾಜ ರಾಯರೆಡ್ಡಿ:- ** ಇದೆ..

ಶ್ರೀ ಪಾಟಾಳ್ ನಾಗರಾಜ್:- ಈ ** ಎನ್ನುವ ಪದ ಇದೆಯಲ್ಲಾ ಇದು ನಿಜವಾಗಿ ಅವರಿಗೆ ಪದ್ಮಶ್ರೀ ಕೊಟ್ಟ ಹಾಗೆ. ಅಥವಾ ಪದ್ಮಭೂಷಣ ಕೊಟ್ಟ ಹಾಗೆ. ಆದ್ದರಿಂದ ಅವರು ಈ ಪದವನ್ನು ತೆಗೆಯಿರಿ ಎಂದು ಹೇಳತಕ್ಕದ್ದು ಸರಿಯಾದುದಲ್ಲ. ಮತ್ತು ಇದು ಪ್ರಜಾಪ್ರಭುತ್ವ ಪದ್ಧತಿಯಲ್ಲಿ ಉಪಯೋಗಿಸತಕ್ಕಂಥ ಪದಗಳೇ. ಇದು ನಮ್ಮ ಪ್ರಜಾತಂತ್ರಕ್ಕೆ ವಿರೋಧವಾದಂಥಹ ಪದಗಳೇನೂ ಅಲ್ಲ. ನಾಯಿ ನಿಷ್ಠೆ ಎಂದು ಹೇಳುತ್ತೇವೆ, ಅಥವಾ ಆಳಿಲು ಸೇವೆ ಎಂದು ಹೇಳುತ್ತೇವೆ. ಶ್ರೀರಾಮನಿಗೆ ಆಳಿಲು ಸೇವೆ ಮಾಡಿತು ಮರಳು ಭಕ್ತಿ ಇತ್ತು ಎಂದು ಹೇಳುತ್ತೇವೆ. ಹಾಗಾದರೆ ಈ ಸಭೆಯಲ್ಲಿ ಆಳಿಲು ಸೇವೆ ಎನ್ನತಕ್ಕಂಥ ಪದವನ್ನು ಉಪಯೋಗಿಸಬಾರದು ಎಂದು ಹೇಳಬಹುದು. ಆದರೆ ಹಿಂದೆ ಶ್ರೀರಾಮನಿಗೆ ಬಹಳ ಆಪ್ಯಾಯಮಾನವಾಗಿ ಆಳಿಲು ಸೇವೆ ಮಾಡಿದೆ. ಹಾಗೆಯೇ ಆಂಜನೇಯನ ಭಕ್ತಿ ಇದೆ.

ಅಧ್ಯಕ್ಷರು:- ಹಾಗೆಯೇ ಆಳಿಲು ಭಕ್ತಿ, ಎಮ್ಮೆ ಚರ್ಮ, ಇದಕ್ಕೆಲ್ಲ ಕಲೊಕ್ವಿಯಲ್ ಮೀನಿಂಗ್ ಬೇರೆ ಇದೆ.

ಶ್ರೀ ಪಾಟಾಳ್ ನಾಗರಾಜ್:- ಮಾನ್ಯ ಚಂದ್ರೇಗೌಡರು ತಮ್ಮ ಉದ್ದೇಶವನ್ನು ಬರೀ ನಾಯಿ ಎನ್ನುವ ಪದಕ್ಕೆ ಸೀಮಿತ ಮಾಡಲಿಲ್ಲ, ** ಎಂದು ಹೇಳಿದ್ದಾರೆ. ಆದುದರಿಂದ ಅದು ಬಹಳ ಪರಿಣಾಮಕಾರಿಯಾಗಿ ಆಡಳಿತ ಪಕ್ಷದವರಿಗೆ ಗೌರವ ತರತಕ್ಕಂಥ ಪದವೇ ಹೊರತು ಕೆಟ್ಟ ಪದ ಏನು ಅಲ್ಲ. ಆದ್ದರಿಂದ ಆ ಪದವನ್ನು ಕಡತದಿಂದ ತೆಗೆಯತಕ್ಕದ್ದು ಒಳ್ಳೆಯದ್ದಲ್ಲ.

ಅಧ್ಯಕ್ಷರು:- ಇದರ ಬಗ್ಗೆ ಸೂಕ್ತ ನಿರ್ಧಾರವನ್ನು ಮಧ್ಯಾಹ್ನ ಪ್ರಕಟಿಸುತ್ತೇನೆ.

ಪ್ರಕಟಣೆ

ಅಧ್ಯಕ್ಷರು:- ಕರ್ನಾಟಕ ವಿಧಾನ ಸಭೆ ಕಾರ್ಯವಿಧಾನ ಹಾಗೂ ನಡವಳಿಕೆ 9ನೇ ನಿಯಮದ ಮೇರೆಗೆ ಈ ಕೆಳಕಂಡ ಮಾನ್ಯ ಸದಸ್ಯರುಗಳನ್ನು ಪ್ರಸ್ತುತ ಅಧಿವೇಶನದ ಸಮಯದಲ್ಲಿ ಅಧ್ಯಕ್ಷರು ಉಪಾಧ್ಯಕ್ಷರು. ಗೈರುಹಾಜರಿಯಲ್ಲಿ ಅಧ್ಯಕ್ಷತೆಯನ್ನು ವಹಿಸಲು ನಾಮನಿರ್ದೇಶನ ಮಾಡಿದ್ದೇನೆ.

ಶ್ರೀಮತಿ ರೇಣುಕಾ ರಾಜೇಂದ್ರನ್,

** ಅಧ್ಯಕ್ಷರ ಅಪ್ಪಣೆಯ ಮೇರೆಗೆ ಮೇಲಿನ ಪದವನ್ನು ತೆಗೆದುಹಾಕಲಾಗಿದೆ.

ಶ್ರೀಮತಿ ದಮಯಂತಿ ಜೋರೇಗೌಡ,
ಶ್ರೀ ಬಸವರಾಜ್ ಪಾಟೀಲ್ ಅಟ್ಟೂರ್,
ಶ್ರೀ ಬ್ಲೇಸಿಯಸ್ ಎಂ.ಡಿ.ಸೌಜ
ಶ್ರೀ ಎ.ಎಂ. ಹಿಂಡಸಗೇರಿ,
ಶ್ರೀ ಎಸ್.ಹೆಚ್. ಕೌಜಲಗಿ.

† ಡಾ: ಜೀವರಾಜ್ ಆಳ್ವ (ಮಲ್ಲೇಶ್ವರಂ):- ಮಾನ್ಯ ಅಧ್ಯಕ್ಷರೆ, ಅತ್ಯಂತ ಬಹಳ ವಿಸ್ಮಯಕಾರಿ ರಾಜಕೀಯ ಬದಲಾವಣೆಯಿಂದ ಇವತ್ತು ಕಾಂಗ್ರೆಸ್ (ಐ) ಪಕ್ಷದ ಶಾಸಕಾಂಗ ಪಕ್ಷದ ನಾಯಕರಾಗಿ ಶ್ರೀ ಎಸ್.ಬಂಗಾರಪ್ಪನವರು ಚುನಾಯಿತರಾಗಿ ರಾಜ್ಯದ ಮುಖ್ಯಮಂತ್ರಿಯಾಗಿದ್ದಾರೆ. ಇದು ಅವರ 10 ವರ್ಷಗಳ ಕನಸು. ವೈಯುಕ್ತಿಕವಾಗಿ ನಮ್ಮ ಒಬ್ಬ ಮಿತ್ರರು ಮುಖ್ಯಮಂತ್ರಿಯಾಗಿದ್ದಾರೆ. ಅವರು ನಮ್ಮ ಜೊತೆಯಲ್ಲಿ ಇದ್ದಿದ್ದರೆ ಎರಡು ವರ್ಷಗಳ ಮೊದಲೇ ಮುಖ್ಯಮಂತ್ರಿ ಆಗುತ್ತಿದ್ದರು ಎಂದು ನನಗೆ ಅನ್ನಿಸುತ್ತಿತ್ತು.

(ಗೊಂದಲ)

ಡಾ: ಜೀವರಾಜ್ ಆಳ್ವ:- ಮಾನ್ಯ ಅಧ್ಯಕ್ಷರೆ, ನಾನು ಹೇಳುವುದಕ್ಕೆ ಕಾರಣವಿದೆ. ಅತ್ಯಂತ ವಿಸ್ಮಯಕಾರಿ ಘಟನೆಗಳಿಂದಾಗಿ ಇವರು ಶಾಸಕಾಂಗ ಪಕ್ಷದ ನಾಯಕರಾಗಿದ್ದಾರೆ. ನಮ್ಮ ಜೊತೆಯಲ್ಲಿ ಇದ್ದಿದ್ದರೆ ಇವರ 10 ವರ್ಷದ ಕನಸು ಇತ್ತಲ್ಲ, ಅದು ನನಸಾಗುತ್ತಿತ್ತು. ಅದು ನನಗೂ ವೈಯುಕ್ತಿಕವಾಗಿ ಬಹಳ ಸಂತೋಷ. ಆದರೆ, ಎರಡು ವರ್ಷದ ಮೊದಲೇ ಮುಖ್ಯಮಂತ್ರಿ ಆಗುತ್ತಿದ್ದರು ಎಂದು ಹೇಳಿದೆ, ಅದಕ್ಕೆ ಏಕೋ ಹೆದರಿಕೆಯಾಗುತ್ತದೆ. ನಮ್ಮ ಜೊತೆಯಲ್ಲಿ ಇದ್ದಿದ್ದರೆ ಎರಡು ವರ್ಷ ಮೊದಲೆ ಆಗುವುದು ಅಲ್ಲದೆ ಸ್ವಲ್ಪ ಹೆಚ್ಚು ಸಮಯ ಮುಖ್ಯಮಂತ್ರಿ ಆಗಿರುತ್ತಿದ್ದರು. ನಿಮ್ಮ ಜೊತೆ ಇದ್ದರೆ ಜಾಸ್ತಿ ಸಮಯ ಇರುವುದಿಲ್ಲ. ಈಗ ಅವರು ವಿಶ್ವಾಸ ಮತಯಾಚನೆ ಮಾಡಿದ್ದಾರೆ. ಶಾಸನಸಭಾ ಸದಸ್ಯರ ವಿಶ್ವಾಸ ಮತ ಯಾಚನೆಯನ್ನು ತಮ್ಮ ಅಧ್ಯಕ್ಷತೆಯಲ್ಲಿ ಮಾಡುತ್ತಿದ್ದಾರೆ. ಆದರೆ, ಇದೇ ವಿಶ್ವಾಸ ಮತವನ್ನು ಅವರು ಶಾಸಕಾಂಗ ಪಕ್ಷದಲ್ಲಿ ಕೇಳಿದ್ದರೆ ಅದರ ಗತಿ ಏನಾಗುತ್ತಿತ್ತು ಎಂಬುದು ತಮಗೆ ಗೊತ್ತೇ ಇದೆ. ಪ್ರಥಮ ಬಾರಿಗೆ ಕರ್ನಾಟಕ ರಾಜ್ಯದ ಮುಖ್ಯಮಂತ್ರಿಗಳು ಇಲ್ಲಿ ಓಟ್ ಆಫ್ ಕಾನ್‌ಫೆಡೆನ್ಸ್ ಕೇಳಿದರು. ಜೊತೆಗೆ ಓಟ್ ಆಫ್ ಕಾನ್‌ಫಡೆನ್ಸ್ ಅನ್ನು ಕೇಳಿದ್ದೇ ಶಾಸಕಾಂಗ ಪಕ್ಷದಲ್ಲಿ ಕೂಡ ಆ ಧೈರ್ಯವನ್ನು ಬಂಗಾರಪ್ಪನವರು ಕಾಂಗ್ರೆಸ್ ಐ ಶಾಸಕಾಂಗ ಪಕ್ಷದಲ್ಲಿ ಯುನಾನಿಮಸ್ ಆಗಿ ಆಯ್ಕೆ ಆದಮೇಲೆ ಮರುದಿವಸ ನಾನು ನಾಯಕನಾಗಿ ಚುನಾಯಿತನಾಗಿದ್ದೇನೆ; ಶಾಸನಸಭಾ ಸದಸ್ಯರೆ, ನಿಮಗೆ ನನ್ನ ಮೇಲೆ ವಿಶ್ವಾಸ ಇದೆಯೇ ಎಂದು ಕೇಳಿದ್ದರೆ ಏನು ಆಗುತ್ತಿತ್ತು ಎನ್ನುವುದು ಆಲೋಚನೆಗೆ ತರಬೇಕು.

(ಗೊಂದಲ)

ಶ್ರೀ ಎಸ್. ಬಂಗಾರಪ್ಪ:- ರಾಮಕೃಷ್ಣ ಹೆಗಡೆಯವರನ್ನು ನಾಯಕರನ್ನಾಗಿ ಮಾಡಬೇಕಾದರೆ ನಿಮ್ಮ ಪಾರ್ಟಿಯಲ್ಲಿ ಓಟ್ ನಡೆದಿತ್ತೇ? ಎಷ್ಟೆಷ್ಟು ಓಟು ಬಂದಿತ್ತು ಎಂದು ಲೆಕ್ಕ ಕೊಡಿ. ಸರ್ವಾನುಮತ ಎಂದು ಹೇಳಿದ್ದಿರಿ. ಆದೇ ರೀತಿ ನಾವು ಕೂಡ ಸರ್ವಾನುಮತ ಎಂದು ಮಾಡಿದ್ದೇವೆ.

ಡಾ: ಜೀವರಾಜ್ ಆಳ್ವ:- ನನಗೆ ಏನು ಯೋಚನೆ, ನೋವು ಆಂದರೆ ತಮಗೆ ನೆನಪು ಇದೆ. ಐತಿಹಾಸಿಕ ನಿರ್ಣಯನವನ್ನು ರಾಜ್ಯದ ಜನತೆ ಕಾಂಗ್ರೆಸ್ ಪಕ್ಷಕ್ಕೆ ಕೊಟ್ಟಿದೆ, ಒಳ್ಳೆಯ ನಾಯಕರು ಇದ್ದಾರೆ, ಚೆನ್ನಾಗಿ ಕೆಲಸ ಮಾಡಿ ಎಂದು ಹೇಳಿದರೆ ಆ ದಿವಸ ಭಾಷಣ ಮಾಡುವಾಗ ಹಾಸ್ಯ ಮಾಡಿದರು. ಹಾಸ್ಯ ಮಾಡಿದಾಗ ನಾನು ಒಂದು ಮಾತನ್ನು ಹೇಳಿದೆ. "This monolithic rock will break on one day." ಎಂದು.

(ಗೊಂದಲ)